# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | **89 (42)** |
| ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 04.12.2023 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸರ್ಕಾರಿ ಇಲಾಖೆಗಳಲ್ಲಿ ಇನ್ನೂ ಬೆರಳಚ್ಚು ಯಂತ್ರಗಳನ್ನು ಬಳಸಲಾಗುತ್ತಿದೆಯೇ; | ಇಲ್ಲ |
| ಆ) | ಇಲ್ಲದಿದ್ದಲ್ಲಿ, ಬೆರಳಚ್ಚು ಪರೀಕ್ಷೆಗಳನ್ನು ಇನ್ನೂ ಬೆರಳಚ್ಚು ಯಂತ್ರಗಳನ್ನು ಮುಂದುವರಿಸಲು ಕಾರಣಗಳೇನು; | ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 114 ವಿವಿಧ 1998 ದಿನಾಂಕ:04/11/1999ರನ್ವಯ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳು (ವಾಣಿಜ್ಯ ಶಿಕ್ಷಣ ಸಂಸ್ಥೆಗಳ ನೊಂದಣಿ ಮತ್ತು ಮಾನ್ಯತೆ) ನಿಯಮಗಳು 1999ರನ್ವಯ ಬೆರಳಚ್ಚು ಪಠ್ಯ ವಸ್ತುವನ್ನೊಳಗೊಂಡ ಪಠ್ಯ ಪುಸ್ತಕವು ಸರ್ಕಾರದಿಂದ ಮುದ್ರಿತವಾಗಿದ್ದು, ಈ ಪಠ್ಯ ಕ್ರಮದಂತೆ ಬೆರಳಚ್ಚು ಶಿಕ್ಷಣವನ್ನು ಬೆರಳಚ್ಚು ಯಂತ್ರದಲ್ಲಿ ನೀಡುತ್ತಾ, ಇಂದಿನವರೆಗೂ ಬೆರಳಚ್ಚು ಯಂತ್ರಗಳಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ.<br><br>ಈ ಕೆಳಕಂಡ ಕಾರಣಗಳಿಂದ ಬೆರಳಚ್ಚು ಪರೀಕ್ಷೆಗಳನ್ನು ಬೆರಳಚ್ಚು ಯಂತ್ರಗಳಲ್ಲೇ ಮುಂದುವರೆಸಿದೆ;<br><br>1. ಬೆರಳಚ್ಚು ಯಂತ್ರದ ಕೀಬೋರ್ಡ್‌ದಲ್ಲಿನ ಕೀಲಿಮಣೆಗಳು ದೃಡವಾಗಿ (Strong) ಇರುವುದರಿಂದ ಮತ್ತು ಬೆರಳಚ್ಚು ಪಠ್ಯದಲ್ಲಿ ಪ್ರತಿ ಅಕ್ಷರಗಳ ಬೆರಳಚ್ಚು ಮಾಡುವುದನ್ನು ಪ್ರತಿ ದಿನ ಪುನಃ ಪುನಃ ಅಭ್ಯಾಸ ಮಾಡಿಸುವುದರಿಂದ ವಿದ್ಯಾರ್ಥಿಗಳು ಕೀಲಿಮಣೆಯಲ್ಲಿನ ಪ್ರತಿ ಅಕ್ಷರ, ಪ್ರತಿ ಗುಂಡಿಗಳ ಪರಿಚಯ ಹೊಂದಿ, ಕಾರ್ಯ ನಿರ್ವಹಣೆಯಲ್ಲಿ ಪರಿಣತಿ ಹೊಂದುತ್ತಾರೆ.<br>2. ಬೆರಳಚ್ಚು ಯಂತ್ರಗಳಲ್ಲಿ ಶಿಕ್ಷಣ ಪಡೆದಲ್ಲಿ ಕಂಪ್ಯೂಟರ್ ನಲ್ಲಿ ಸುಲಭವಾಗಿ ಮತ್ತು ವೇಗವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ. |
| ಇ) | ತಕ್ಷಣದಿಂದ ಜಾರಿಗೆ ಬರುವಂತೆ ಬೆರಳಚ್ಚು ಪರೀಕ್ಷೆಗಳನ್ನು ಗಣಕಯಂತ್ರಗಳ ಮೂಲಕವೇ ನಡೆಸಲು ಕ್ರಮ ಜರುಗಿಸಲಾಗುವುದೇ? | ಇಲ್ಲ |

ಸಂಖ್ಯೆ:ಇಪಿ 153 ಎಸ್‌ಓಹೆಚ್ 2023

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು